**O. S. No:117/2024**
**PW:1**

(ಇಂದು ದಿನಾಂಕಃ **29-04-2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಎಂ ಟಿ ಎಚ್ ವಕೀಲರಿಂದಃ**

ನಮ್ಮ ಕುಟುಂಬ ಹಾಗೂ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ತಂದೆಗೆ 66 ವರ್ಷ ಹಾಗೂ ನನಗೆ 24 ವರ್ಷ. ನನ್ನ ತಂದೆ ಪಾರ್ಶ್ವವಾಯು ಆಗಿದ್ದು ಅವರಿಗೆ ನಡೆದಾಡಲು ಬರುವುದಿಲ್ಲ. ಸದರಿ ವಿಷಯ ತೋರಿಸಲು ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೊದಲು ಮಾತನಾಡುತ್ತಾರೆ. ಸದರಿಯವರು ಮಾತನಾಡುವುದು ಬೇರೆಯವರಿಗೆ ಸರಿಯಾಗಿ ಅರ್ಥ ಆಗುವುದಿಲ್ಲ. ನನ್ನ ತಂದೆ ಸರಿಯಾಗಿ ಮಾತನಾಡದ ಕಾರಣ ನನಗೆ ದಾವೆಯ ಬಗ್ಗೆ ಹಾಗೂ ದಾವಾ ಆಸ್ತಿಯ ಬಗ್ಗೆ ಸರಿಯಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಮೊದಲಿನಿಂದ ಸದರಿ ವಿಷಯಗಳ ಬಗ್ಗೆ ಮಾಹಿತಿ ಇರುತ್ತದೆ ಎಂದು ನುಡಿದಿರುತ್ತಾರೆ.

2. ನನ್ನ ಅಜ್ಜನ ಹೆಸರು ಶಿವಪ್ಪ ಹಾಗೂ ಆತನ ಹೆಂಡತಿಯ ಹೆಸರು ನೀಲವ್ವ. ಸದರಿಯವರಿಬ್ಬರು ಮೃತಪಟ್ಟಿರುತ್ತಾರೆ. ಸದರಿಯವರಿಗೆ 3 ಜನ ಗಂಡು ಮಕ್ಕಳು. ಸದರಿಯವರೆಂದರೆ ವಾದಿ, 1 ನೇ ಪ್ರತಿವಾದಿ ಹಾಗೂ ಮೃತ ಈಶ್ವರಪ್ಪ. ಸದರಿ ಈಶ್ವರಪ್ಪನವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿಯವರ ಮೊದಲನೇಯ ಹೆಂಡತಿ ಕಲಾವತಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರಿಗೆ 3 ಮತ್ತು 5 ನೇ ಪ್ರತಿವಾದಿಯರು ಮಕ್ಕಳಿರುತ್ತಾರೆ ಎಂದರೆ ಸರಿ. ಈಶ್ವರಪ್ಪ ತನ್ನ ಮೊದಲನೇಯ ಹೆಂಡತಿ ಜೀವಂತವಿದ್ದಾಗ ಕಾಶವ್ವ ಎನ್ನುವವರನ್ನು 2 ನೇ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕಾಶವ್ವ ಮುಖಾಂತರ 4 ಮತ್ತು 6 ನೇ ಪ್ರತಿವಾದಿಯರು ಜನಿಸಿರುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿಗೆ 6 ನೇ ಪ್ರತಿವಾದಿ ಕಿರಿಯ ಮಗಳಾಗಿರುತ್ತಾಳೆ ಎಂದರೆ ಸರಿ. ಸದರಿಯವರು ನನಗಿಂತ 12 ವರ್ಷ ದೊಡ್ಡವಳು ಎಂದರೆ ಸರಿ. ಈಶ್ವರಪ್ಪನವರು ಕಾಶವ್ವ ರವರೊಂದಿಗೆ ಯಾವ ವರ್ಷದಲ್ಲಿ ಮದುವೆಯಾಗಿರುತ್ತಾರೆ ಎಂದು ಹೇಳಲಾಗುವುದಿಲ್ಲ. ನಾನು ಜನಿಸುವುದಕ್ಕಿಂತ 20 ವರ್ಷಗಳ ಮೊದಲೇ ಕಾಶವ್ವ ರವರ ಮದುವೆ ಈಶ್ವರಪ್ಪರವರೊಂದಿಗೆ ಆಗಿದೆ ಎಂದರೆ ಸರಿ. ಕಾರಣ ಈಶ್ವರಪ್ಪರವರು ಮೊದಲನೇ ಹೆಂಡತಿ ಜೀವಂತವಿದ್ದಾಗ 2 ನೇ ಮದುವೆ ಮಾಡಿಕೊಂಡಿರುತ್ತಾರೋ ಇಲ್ಲವೋ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ಮನೆಯಲ್ಲಿ ನಮ್ಮ ತಂದೆ ಮಾತನಾಡುವುದನ್ನು ಕೇಳಿಸಿಕೊಂಡ ಕಾರಣ ನನಗೆ ಗೊತ್ತಿರುತ್ತದೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಮಾತನಾಡಲು ಹಾಗೂ ನಡೆದಾಡಲು ಬರುತ್ತಿದ್ದರೂ ಸಹ ನನ್ನ ಪರವಾಗಿ ಸುಳ್ಳು ಜಿ ಪಿ ಎ ಬರೆದುಕೊಟ್ಟಿರುತ್ತಾರೆ ಎಂದರೆ

ಸರಿಯಲ್ಲ. ನನ್ನ ತಂದೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ನಿಜವಾದ ವಿಷಯ ಗೊತ್ತಾಗುತ್ತದೆ ಎನ್ನುವ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**